ಮೈಸೂರು ವಿಶ್ವವಿದ್ಯಾನಿಲಯದ ಡಾಕ್ಟರೇಟ್ ಪದವಿಯನ್ನು ಮುಖ್ಯ ಮಂತ್ರಿಯವರು ನಿರಾಕರಿಸಿರುವುದು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಮಾನ್ಯ ಮುಖ್ಯಮಂತ್ರಿಗಳಿಗೆ ಮೈಸೂರು ವಿಶ್ವವಿದ್ಯಾಲಯ ಡಾಕ್ಟರೇಟ್ ಪದವಿಯನ್ನು ಪ್ರದಾನ ಮಾಡಬೇಕೆಂದು ತೀರ್ಮಾನಿಸಿದೆ ಎಂದು ನಾವೆಲ್ಲ ಪತ್ರಿಕೆಯಲ್ಲಿ ಓದಿದ್ದೇವೆ. ಈಗ ಮುಖ್ಯಮಂತ್ರಿಗಳು ದೆಹಲಿಯಿಂದ ಸೂಚನೆ ಕಳಿಸಿದ್ದಾರೆ. ಏನೆಂದರೆ, ತಮ್ಮ ಕೃತಜ್ಞತೆಗಳನ್ನು ವಿಶ್ವವಿದ್ಯಾಲಯಕ್ಕೆ ಅರ್ಪಿಸಿ ಆದರೆ ಈ ಪ್ರಶಸ್ತಿಯನ್ನು ತೆಗೆದುಕೊಳ್ಳುವುದಕ್ಕೆ ಒಲ್ಲೆ ಎಂದು ತಿಳಿಸಿದ್ದಾರೆ.

ಶ್ರೀ ಆರ್.ವಿ. ದೇಶಪಾಂಡೆ:- ಬೇಡಾಂತ ಏಕೆ? ಅರ್ಹತೆ ಇಲ್ಲ ಎಂತಲೋ, ಏಕೆ ಇಷ್ಟು ದೊಡ್ಡದನ್ನು ಬೇಡ ಎನ್ನುವುದು?

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ:- ಬೇಡಾಂತ ಹೇಳಿದ್ದಾರೆ. ಅದಕ್ಕೆ ಅರ್ಥ ಕಲ್ಪಿಸುವುದು ಬೇಡ. ಅದನ್ನು ಸಭೆಯ ಮೂಲಕ ಜನರಿಗೆ ತಿಳಿಸುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಅವರು ಕೊಡುತ್ತೇವೆಂದು ಹೇಳುವುದು ನೀವು ಬೇಡವೆಂದು ಹೇಳುವುದು ಇದೆಲ್ಲ ಅರ್ಥವಾಗುತ್ತಿಲ್ಲ. ಇದೆಲ್ಲ ಮಾತುಕತೆಯ ಮೂಲಕ ಆಗಿದೆಯೇ? ಅಥವಾ ವಿಶ್ವವಿದ್ಯಾಲಯಗಳು ಅಧಿಕಾರದಲ್ಲಿರುವವರನ್ನು ಪ್ಲೀಸ್ ಮಾಡುವುದಕ್ಕಾಗಿ ಕೊಡುವ ಪಾಲಿಸಿಯೋ ಅರ್ಥವಾಗುತ್ತಿಲ್ಲ. ಕಲೆ, ವಿಜ್ಞಾನ ಕ್ಷೇತ್ರಗಳಲ್ಲಿ ಅಥವಾ ಅಂತರಾಷ್ಟ್ರೀಯ ಮಟ್ಟದಲ್ಲಿ ನೋಬೆಲ್ ಪ್ರಶಸ್ತಿ ಕೊಡುತ್ತಾರಲ್ಲ ಅಂಥವರಿಗೇನಾದರೂ ವಿಶ್ವವಿದ್ಯಾನಿಲಯದವರು ಡಾಕ್ಟರೇಟ್ ಪದವಿ ಕೊಡುತ್ತೇವೆಂದು ಹೇಳಿದರೆ ಅದು ಒಪ್ಪತಕ್ಕ ವಿಚಾರ. ಶಿವರಾಮಕಾರಂತರಿಗೆ, ಡಾ. ರಾಜಕುಮಾರ್ ಅವರಿಗೆ, ಪುಟ್ಟಪ್ಪನವರಿಗೆ ಡಾಕ್ಟರೇಟ್ ಕೊಡುತ್ತೇವೆ ಎಂದರೆ ಅದರಲ್ಲಿ ಅರ್ಥವಿದೆ. ಆದರೆ ಮೊಯ್ಲಿಯವರು ಮುಖ್ಯಮಂತ್ರಿಯಾಗಿ ಇನ್ನೂ ೧೦೦ ದಿನದ ಕಾರ್ಯಕ್ರಮ ಇನ್ನೂ ಏನೂ ಮಾಡಿಲ್ಲ ಎಂದು ನಾವು ಅಂದುಕೊಂಡಿದ್ದೇವೆ. ಅಂಥಾದ್ದರಲ್ಲಿ ಇವರಿಗೆ ಡಾಕ್ಟರೇಟ್ ಏಕೆ ಕೊಟ್ಟರು ಎಂದು ನಮಗೆ ಅರ್ಥವಾಗುತ್ತಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ:- ಮಾನ್ಯ ರಾಮಸ್ವಾಮಿಯವರು ಹೇಳಿದ್ದನ್ನು ಕೇಳಿ ನನಗೆ ನಗಬೇಕೋ ಅಥವಾ ಸ್ವಲ್ಪ ಮಟ್ಟಿಗೆ ಕನಿಕರ ತೋರಿಸಬೇಕೋ ಗೊತ್ತಾಗುತ್ತಿಲ್ಲ. ಮೈಸೂರು ವಿಶ್ವವಿದ್ಯಾನಿಲಯದವರು ಮೊಯ್ಲಿಯವರಿಗೆ ಡಾಕ್ಟರೇಟ್ ಕೊಡಬೇಕೆಂದು ನಿರ್ಧಾರ ಮಾಡಿದ್ದರೆ. ಆ ರೀತಿ ನಿರ್ಧಾರ ಮಾಡುವುದಕ್ಕಿಂತ ಮೊದಲು ಅವರನ್ನು ಕೇಳಬೇಕು. ನನಗೂ ಅನೇಕ ವಿಶ್ವವಿದ್ಯಾಲಯಗಳವರು ಕೇಳಿದ್ದರು, ನಾನು ಸ್ವೀಕಾರ ಮಾಡುವುದಿಲ್ಲವೆಂದು ಹೇಳಿದೆ. ಈಗ ಅವರು ಕೇಳಿದ್ದರೆ ಮೊದಲೇ ಇವರು ನಿರಾಕರಣೆ ಮಾಡಬೇಕಾಗಿತ್ತು. ಇವರನ್ನು ಕೇಳದೆ ನಿರ್ಧಾರ ಮಾಡುವುದಕ್ಕೆ ಸಾಧ್ಯವೇ ಇಲ್ಲ. ಪದ್ಮಶ್ರೀ ಕೊಡುವಾಗಲೂ ಕೇಳುತ್ತಾರೆ. ಕೇಳದೆ ಮಾಡಿದ್ದರೆ ಅವರು ಉತ್ತರ ಕೊಡಬೇಕಾಗುತ್ತದೆ. ಆಗ ಮುಖ್ಯಮಂತ್ರಿಗೆ ಮಾಡಿದ ಅಪಚಾರ ಅದು. ಪದ್ಮಶ್ರೀಯಾಗಲಿ. ಭಾರತರತ್ನ ಆಗಲಿ ಕೊಡುವಾಗ ನೀವು ಸ್ವೀಕಾರ ಮಾಡುತ್ತೀರೋ ಎಂದು ಕೇಳುತ್ತಾರೆ. ಈಗ ಇದು ನೋಡಿದರೆ ನೀವು ಅತ್ತಹಾಗೆ ಮಾಡಿ, ನಾನು ಹೊಡೆದ ಹಾಗೆ ಮಾಡುತ್ತೇನೆ ಎಂದ ಹಾಗೆ ತುಂಬ ನಾಟಕೀಯ ಎಂದು ಕಾಣುತ್ತದೆ. ಇದನ್ನು ನಂಬುವುದು ಕಷ್ಟ.

ಶ್ರೀ ವಾಟಾಳ್ ನಾಗರಾಜ್:- ಮಾನ್ಯ ಅಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಡಾಕ್ಟರೇಟ್, ಪದ್ಮಶ್ರೀ, ಪದ್ಮಭೂಷಣಗಳನ್ನು ಕೊಡುತ್ತಿದ್ದಾರೆ. ಮಾನ್ಯ ವೀರಪ್ಪಮೊಯ್ಲಿಯವರಿಗೆ ಡಾಕ್ಟರೇಟ್ ಕೊಟ್ಟಿದ್ದನ್ನು ನಾನು ವಿರೋಧ ಮಾಡುವುದಕ್ಕೆ ಹೋಗುವುದಿಲ್ಲ. ವಿಶ್ವವಿದ್ಯಾಲಯದವರು ಡಾಕ್ಟರೇಟ್ ಕೊಡಬೇಕೆಂದು ತೀರ್ಮಾನ ಮಾಡಿದ್ದಾರೆ, ಮುಖ್ಯ

ಮಂತ್ರಿಯವರು ಬೇಡವೆಂದು ಹೇಳಿದ್ದಾರೆ. ಇದರಲ್ಲೇನಿರಬೇಕು ಎಂದು ನನಗೆ ಅರ್ಥವಾಗುತ್ತಿಲ್ಲ. ಆದರೆ ಡಾಕ್ಟರೇಟ್, ಪದ್ಮಶ್ರೀಗಳು ಇತ್ತೀಚಿನ ದಿನಗಳಲ್ಲಿ ವ್ಯಾಪಾರದ ವಸ್ತುಗಳಾಗಿವೆ. ಹಿಂದೆ ನಮ್ಮಲ್ಲೂ ಅನೇಕರಿಗೆ ಪದ್ಮಶ್ರೀ ಬಂತು. ನಿಜವಾಗಿಯೂ ಪದ್ಮಶ್ರೀ ಪಡೆಯುವಂಥವರನ್ನು ಒಂದು ಸಿಬಿಐ ಎನ್‌ಕ್ವಯರಿ ಮಾಡಬೇಕಾಗಿದೆ.

ಶ್ರೀ ರಾಮಕೃಷ್ಣ ಹೆಗಡೆ:- ದೆಹಲಿಯಲ್ಲಿ ಯಾರ ಮೇಲೆ ಕ್ರಿಮಿನಲ್ ಖಟ್ಲೆ ಹಾಕಿದ್ದರೋ ಸ್ಮಗಲಿಂಗ್ ಬಗ್ಗೆ ಅಂಥವರಿಗೆ ಪ್ರಶಸ್ತಿ ಕೊಟ್ಟಿದ್ದಾರೆ.

ಶ್ರೀ ವಾಟಾಳ್ ನಾಗರಾಜ್:- ತಾವು ಹೇಳಿದ್ದು ಕರೆಕ್ಟ್. ಈ ರೀತಿ ಪದ್ಮಶ್ರೀಗಳು, ಪದ್ಮಭೂಷಣಗಳು, ಪದ್ಮವಿಭೂಷಣಗಳು ಯಾರಿಗೆ ಚಾರಿತ್ರ್ಯ ಇಲ್ಲ ಅಂಥವರಿಗೆ ಕೊಡುವುದು ಒಂದು. ಮತ್ತು ಇತ್ತೀಚಿನ ದಿನಗಳಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಎಂದು ಕೊಡುತ್ತಾರೆ. ಕಾಲಕಸಕ್ಕೂ ಕೊಡುತ್ತಿದ್ದಾರೆ. ಅದಕ್ಕೇನು ಬೆಲೆ, ರೀತಿ ನೀತಿ ಯಾವುದೂ ಇಲ್ಲದಂತಾಗಿದೆ. ಇಂಥದ್ದರ ಬಗ್ಗೆ ತಾವು ಚಿಂತನೆ ಮಾಡಬೇಕು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕೊಡಬೇಕಾದರೆ ೧೮೦ ಜನ, ೨೦೦ ಜನ ಟ್ರಕ್ ಲೋಡ್ ಜನರನ್ನು ಕರೆದುಕೊಂಡು ಹೋಗಿ ಕುಳಿತುಕೊಳ್ಳುವುದಕ್ಕೆ ಸ್ಥಳವಿಲ್ಲದೆ, ಕುರ್ಚಿ ಇಲ್ಲದೆ ನೀವು ಕೊಡುವ ಹತ್ತು ಸಾವಿರ ರೂಪಾಯಿಗೆ ಕೈ ಮುಗಿದುಕೊಂಡು ಅಲ್ಲಿ ನಿಂತುಕೊಂಡು ಮಾನ, ಮರ್ಯಾದೆ ಇಲ್ಲವೇ? ಮಾನ್ಯ ಹೆಗಡೆಯವರೇ, ತಮಗೆ ಹೇಳುತ್ತೇನೆ. ನಿಮ್ಮ ಕಾಲದಲ್ಲಿ ಈ ರೀತಿ ಆಗಲಿಲ್ಲ. ನಾನು ಹೇಳುತ್ತೇನೆ, ಕೆಲವು ವಿಚಾರದಲ್ಲಿ ನಾನು ನಿಮ್ಮನ್ನು ಒಪ್ಪುತ್ತೇನೆ.

ಛೇರ್ಮನ್:- ಇದರ ಬಗ್ಗೆ ಚರ್ಚೆ ಬೇಡ.

ಶ್ರೀ ವಾಟಾಳ್ ನಾಗರಾಜ್:- ಅವರು ಆ ಮಾತನ್ನು ಹೇಳಿದಾಗ ನಾನು ಅದನ್ನು ಹೇಳಬೇಕಾಗಿದೆ. ನಾನು ಕನ್ನಡ-ಇಂಥ ಪ್ರಶ್ನೆ ಬಂದಾಗಲೆಲ್ಲ ಹೆಗಡೆಯವರ ಬಗ್ಗೆ ನನಗೆ ಮೊದಲು ಅವರಿಗೂ ನಮಗೂ ಬಹಳ ಬಾಂಧವ್ಯ ಇದೆ. ಅದರ ಬಗ್ಗೆ ನಮಗೆ ಎರಡನೇ ಅಭಿಪ್ರಾಯವಿಲ್ಲ. ನಮ್ಮಿಬ್ಬರದೂ ಒಂದೇ ಅಭಿಪ್ರಾಯ. ನಾನು ಏನು ಹೇಳುತ್ತೇನೆ ಎಂದರೆ ಅಂಥ ವಿಚಾರ ಬಂದಾಗ ಸ್ಪಷ್ಟವಾದಂಥ ಒಳ್ಳೆಯ ನಿರ್ಧಾರಗಳನ್ನು ಅನೇಕ ಸಾರಿ ಕೈಗೊಂಡಿದ್ದಾರೆ. ನಾನು ತಮಗೆ ಏನು ಹೇಳುತ್ತಿದ್ದೇನೆ ಎಂದರೆ, ಇತ್ತೀಚೆಗೆ ಅಂದರೆ ಮೊನ್ನೆ ನಮ್ಮ ಹಿಂದಿನ ಸರ್ಕಾರ ೧೯೦ ಜನರಿಗೆ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಟ್ಟಿದ್ದಾರೆ. ಅದರ ಹಿಂದೆ ೧೨೦ ಜನರಿಗೆ ಕೊಟ್ಟಿದ್ದಾರೆ. ಈ ರೀತಿ ಕೊಡುತ್ತಾ ಹೋದರೆ ರಾಜ್ಯೋತ್ಸವ ಪ್ರಶಸ್ತಿಗಳಿಗೆ ಏನಾದರೂ ಒಂದು ಗೌರವ ಬರುತ್ತದೆಯೇ? ಕರ್ನಾಟಕ ರತ್ನವನ್ನು ಕೊಟ್ಟರು. ಇದ್ದಕ್ಕಿದ್ದ ಹಾಗೆ ಈ ರತ್ನಗಳನ್ನು ಶುರುಮಾಡಿಬಿಟ್ಟರು. ಯಾರಿಗೆ ಕೊಟ್ಟರು ಎನ್ನುವ ಬಗ್ಗೆ ನನಗೆ ಚಿಂತೆ ಇಲ್ಲ. ರಾಷ್ಟ್ರ ಕವಿ ಕುವೆಂಪುರವರಿಗೆ ನೀವು ಕರ್ನಾಟಕ ರತ್ನವನ್ನು ಕೊಟ್ಟರೂ ಅವರು ಕರ್ನಾಟಕವನ್ನು ಮೇಲೇರಿ ವಿಶ್ವವಿಖ್ಯಾತರಾಗಿ ಹೊರಟು ಹೋಗಿದ್ದಾರೆ. ನಿಮ್ಮ ರತ್ನಗಳೇನು ಅವರಿಗೆ ಬೇಕಾಗಿಲ್ಲ. ನನ್ನ ಆತ್ಮೀಯರಾದಂಥ ಶ್ರೀಮಾನ್ ರಾಜ್‌ಕುಮಾರ್‌ರವರಿಗೂ ನಿಮ್ಮ ರತ್ನ ಏನೂ ಬೇಕಾಗಿಲ್ಲ. ನಾವ್ಯಾರೂ ಅದನ್ನು ಕೇಳಿಲ್ಲ. ನಮ್ಮನ್ನಂತೂ ನೀವು ಗಮನಿಸುವ ಹಾಗೆ ಇಲ್ಲ. ನಮಗೆ ಅದು ಬೇಕಾಗೂ ಇಲ್ಲ.

ಶ್ರೀ ಎಂ. ಮಹದೇವ್:- ನಿಮಗೆ ಯಾವ ರತ್ನ ಬೇಕು, ಹೇಳಿ.

ಶ್ರೀ ವಾಟಾಳ್ ನಾಗರಾಜ್:- ನನಗೆ ರತ್ನಗಳು ಬೇಡ. ನಮ್ಮಲ್ಲಿ ರಾಷ್ಟ್ರಕವಿ ಕುವೆಂಪುರವರಿಗೆ ಕೊಟ್ಟಿದ್ದೀರಿ. ಡಾ. ಶಿವರಾಮಕಾರಂತರು ಇದ್ದಾರೆ. ಅವರನ್ನು ನೀವು ಗಮನಿಸಬಹುದಾಗಿತ್ತಲ್ಲ. ನನಗೆ ಅನಿಸುತ್ತದೆ, ಈ ರತ್ನಗಳನ್ನು ಕೊಡತಕ್ಕಂಥದ್ದು, ರಾಜ್ಯೋತ್ಸವ ಪ್ರಶಸ್ತಿಯನ್ನು ಕೊಡತಕ್ಕಂಥದ್ದು ಇದು ಯಾವುದೋ ತಮ್ಮ ಒಂದು ಸ್ವಾರ್ಥದ

ಉದ್ದೇಶಕ್ಕೆ ಅಗಬಾರದು. ಇವು ನಿಜವಾಗಿಯೂ ಪ್ರಾಮುಖ್ಯತೆ ಪಡೆದಂಥ ವಸ್ತುಗಳಾಗಬೇಕು. ಬಹುಶಃ ಇತ್ತೀಚಿನ ದಿನಗಳಲ್ಲಿ ನ್ಯಾಯಾಲಯದಲ್ಲಿ ತಡೆಯಾಜ್ಞೆಯಾಗಿ ವರ್ಷ ಕೇಂದ್ರ ಸರ್ಕಾರ ಕೊಡಲಿಲ್ಲ. ಪದ್ಮಶ್ರೀಯಾಗಲಿ, ಪದ್ಮಭೂಷಣವಾಗಲೀ ತಡೆಹಿಡಿದರು. ಅದನ್ನು ಕೊಡಲಿಲ್ಲ. ಮಾನ್ಯ ಅಧ್ಯಕ್ಷರೇ, ತಾವು ನೋಡಬೇಕು. ಪದ್ಮಭೂಷಣ, ಪದ್ಮಶ್ರೀ ತೆಗೆದುಕೊಳ್ಳುವ ದಿವಸ ಒಂದು ಪತ್ರದಲ್ಲಿ ಕೊಟ್ಟುಬಿಡುತ್ತಾರೆ. ಅದಾದಮೇಲೆ ಪದ್ಮಶ್ರೀ ತೆಗೆದುಕೊಂಡಿರುವವರ ಹಣೆಬರಹ ಅವರನ್ನು ಹೇಳುವವರು ಗತಿ ಇಲ್ಲ, ಕೇಳುವವರೂ ಗತಿ ಇಲ್ಲ. ರಸ್ತೆಯಲ್ಲಿ ಬಿದ್ದು ಒದ್ದಾಡಿದರೂ ಕೇಳುವವರು ಗತಿ ಇಲ್ಲ. ಆದ್ದರಿಂದ ಈ ಬಗ್ಗೆ ನಾನು ಏತಕ್ಕೆ ತಮಗೆ ಹೇಳುತ್ತಿದ್ದೇನೆ ಎಂದರೆ, ಹಿಂದೆ ಈ ಸದನದಲ್ಲಿ ಕರ್ನಾಟಕದಲ್ಲಿ ಒಬ್ಬರು ಇಬ್ಬರಿಗೆ ಪದ್ಮಶ್ರೀ ಬಂದಾಗ ನನಗೆ ಬಹಳ ನೋವಾಯಿತು.

ಛೇರ್ಮನ್:- ಪದ್ಮಶ್ರೀ ವಿಚಾರವನ್ನು ನಾವು ಇಲ್ಲಿ ಚರ್ಚೆ ಮಾಡುತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಸಂದರ್ಭ ಬಂದಾಗ ನಾನು ಈ ಮಾತನ್ನು ಹೇಳಬೇಕಾಗಿದೆ. ನಾನು ತಮಗೆ ಏತಕ್ಕೆ ಹೇಳುತ್ತಿದ್ದೇನೆ ಎಂದರೆ, ಇದರ ಬಗ್ಗೆ ಪದ್ಮಶ್ರೀ ಪಡೆದಿರುವವರ ಹಿನ್ನೆಲೆ, ಅವರ ಚಾರಿತ್ರ್ಯವನ್ನು ನೋಡಬೇಕಾದದ್ದು ಅತೀ ಮುಖ್ಯವಾದದ್ದು. ಇವತ್ತು ಮೈಸೂರು ವಿಶ್ವವಿದ್ಯಾನಿಲಯದವರು ಡಾಕ್ಟರೇಟನ್ನು ಮಾನ್ಯ ವೀರಪ್ಪಮೊಯಿಲಿಯವರಿಗೆ ಏತಕ್ಕೆ ಕೊಟ್ಟರೋ ಏನು ಕೊಟ್ಟರೋ ನಮಗಂತೂ ಅರ್ಥವಾಗಿಲ್ಲ.

ಛೇರ್ಮನ್:- ಅವರು ರೆಫ್ಯೂಜ್ ಮಾಡಿ ಆಯಿತು. ಅವರು ಬೇಡ ಎಂದು ಹೇಳಿ ಆಯಿತು. ಅವರು ವಿನಯಪೂರ್ವಕವಾಗಿ ಬೇಡ ಎಂದು ಹೇಳಿದ್ದಾರೆ. ಅಲ್ಲಿಗೆ ಚರ್ಚೆಯನ್ನು ಮುಕ್ತಾಯ ಮಾಡಬೇಕು.

ಶ್ರೀ ಬಿ.ಎಸ್. ಯಡಿಯೂರಪ್ಪ:- ಮಾನ್ಯ ಮುಖ್ಯಮಂತ್ರಿಗಳಿಗೆ ಡಾಕ್ಟರೇಟ್ ಕೊಟ್ಟಿದ್ದು ಸರಿ ತಪ್ಪು ಎಂದು ಚರ್ಚೆ ಮಾಡುವ ಪ್ರಶ್ನೆ ಉದ್ಭವವಾಗುವುದಿಲ್ಲ. ಅವರೇ ಬೇಡ ಎಂದು ಹೇಳಿದ್ದಾರೆ. ಒಬ್ಬ ರಾಜ್ಯದ ಮುಖ್ಯಮಂತ್ರಿಗಳ ಬಗ್ಗೆ ಹೇಳುವುದು ಸರಿಯಲ್ಲ ಅವರಿಗೆ ಏನು ಶಕ್ತಿ ಇಲ್ಲ, ಅವರಿಗೆ ಯೋಗ್ಯತೆ ಇಲ್ಲ ಎಂದು ಒಬ್ಬ ರಾಜ್ಯದ ಮುಖ್ಯಮಂತ್ರಿಗೆ ಹೇಳುವುದು ಸರಿಯಲ್ಲ. ಅವರಿಗೆ ಆ ಶಕ್ತಿ ಇದೆ. ಅವರದೇ ಆದ ಕಾರಣಕ್ಕಾಗಿ ಅದನ್ನು ರೆಫ್ಯೂಜ್ ಮಾಡಿದ್ದಾರೆ. ನಾವೇನೆ ನಮ್ಮ ಮುಖ್ಯಮಂತ್ರಿಗಳ ಬಗ್ಗೆ ಅವಹೇಳನಕರವಾಗಿ ಮಾತನಾಡುವುದು ಬೇಡ. ಬಹುಶಃ ಅದು ಸರಿಹೋಗಲಿಕ್ಕಿಲ್ಲ.

ಛೇರ್ಮನ್:- ಡಾಕ್ಟರೇಟನ್ನು ವೀರಪ್ಪಮೊಯಿಲಿಯವರಿಗೆ ಕೊಟ್ಟಿದ್ದು ತಪ್ಪು ಎಂದು ನಾನು ಹೇಳಲಿಲ್ಲ. ಅವರು ಮುಖ್ಯಮಂತ್ರಿಯಾಗಿದ್ದಾರೆ. ಅವರಲ್ಲಿ ವಿಶಿಷ್ಟವಾದ ಗುಣಗಳನ್ನು ಮೈಸೂರು ವಿಶ್ವವಿದ್ಯಾನಿಲಯ ಕಂಡಿರಬಹುದು, ಕೊಟ್ಟಿರಬಹುದು. ಅವರನ್ನು ಉದ್ದೇಶಿಸಿ ಹೇಳುತ್ತಿಲ್ಲ. ಅವರು ವಸ್ತುವಲ್ಲ. ಅವರಿಗೆ ಕೊಟ್ಟಿದ್ದೇಕೆ, ಅವರಿಗೆ ಕೊಡಬಾರದು ಎಂದು ನಾನು ಹೇಳುತ್ತಿಲ್ಲ. ನನ್ನದೇನೂ ಇದರಲ್ಲಿ ಅಭ್ಯಂತರವಿಲ್ಲ. ನಾನು ಸಮಗ್ರವಾಗಿ ಈ ಪ್ರಶಸ್ತಿಗಳು ಏನಾಗುತ್ತಿದೆ ಎನ್ನುವುದರ ಬಗ್ಗೆ ಹೇಳುತ್ತಿದ್ದೇನೆಯೇ ಹೊರತು ಮಾನ್ಯ ವೀರಪ್ಪಮೊಯಿಲಿಯವರಿಗೆ ಕೊಟ್ಟಿದ್ದನ್ನು ಇಲ್ಲಿ ಕೊಡಬಾರದು ಎಂದು ಚರ್ಚೆ ಮಾಡುವವನಲ್ಲ. ಅವರು ಕೊಟ್ಟಿದ್ದನ್ನು ನಾನು ತೆಗೆದುಕೊಳ್ಳುವುದಿಲ್ಲ ಎಂದು ಹೇಳಿ ಒಂದು ದೊಡ್ಡ ಗುಣವನ್ನು ತೋರಿಸಿ ಅದನ್ನು ಹಿಂದಕ್ಕೆ ಕಳುಹಿಸಿದ್ದಾರೆ. ನಾನು ಆ ಬಗ್ಗೆ ಅವರನ್ನು ಅಭಿನಂದಿಸುತ್ತೇನೆ. ಅವರ ಬಗ್ಗೆ ಹೇಳಿರತಕ್ಕಂಥ ಮಾತು ನಿಜಕ್ಕೂ ಗೌರವ ತರತಕ್ಕಂಥ ಮಾತು. ಅದರ ಬಗ್ಗೆ ನಮ್ಮದೇನೂ ತಕರಾರು ಇಲ್ಲ. ಆದರೆ ಈ ವಿಶ್ವವಿದ್ಯಾನಿಲಯಗಳು ಸಹ ಈ ರೀತಿಯ ವ್ಯವಸ್ಥೆಗೆ ಹೊರಟಿವೆ ಎನ್ನತಕ್ಕ ಮಾತನ್ನು ನಾನು ಹೇಳುತ್ತಿದ್ದೇನೆ.

ಛೇರ್ಮನ್:- ಸಾಕು ಇಲ್ಲಿಗೆ ಮುಗಿಸೋಣ..

ಶ್ರೀ ಜಿ.ಸಿ. ಮಾಧುಸ್ವಾಮಿ:- ವೀರಪ್ಪನಿಗೊಂದು ಮಾಸ್ಟರ್ ಕ್ರಿಮಿನಾಲಜಿ ಎಂದು ಪ್ರಶಸ್ತಿ ಕೊಡಿಸಿ ಬಿಡಿ.

ಛೇರ್ಮನ್:- ದಯವಿಟ್ಟು ಇದರ ಮೇಲೆ ಚರ್ಚೆ ಮಾಡಬೇಡಿ, ಮುಗಿದುಹೋಯಿತು.

(ಗೊಂದಲ)

ಶ್ರೀ ಎಸ್.ಹೆಚ್. ಕೌಜಲಗಿ:- ಇವತ್ತಿನ ದಿವಸ ಕರ್ನಾಟಕ ರತ್ನ ನಮ್ಮ ಎಸ್.ಟಿ. ಬಾಳೆಕುಂದ್ರಿಯಂತಹ ನೀರಾವರಿ ತಜ್ಞರಿಗೆ ಕೊಡಿ ಎಂದು ನಾವು ಲೆಟರ್ ಅನ್ನು ಬರೆದರೂ ಅವರಿಗೆ ಕೊಡಲಿಲ್ಲ. ಅದಲ್ಲದೆ ಬಾಳಪ್ಪ ಹುಕ್ಕೇರಿಯವರಿಗೆ ಕೊಡಬೇಕೆಂದು ಪತ್ರ ಬರೆದೆವು. ಶ್ರೀಮಾನ್ ಜಿ.ಎಂ. ಪೊಪಣ್ಣನವರು, ಕರ್ನಾಟಕ ಸಲುವಾಗಿ ಬೆಳಗಾಂ ಹೋರಾಟಮಾಡಿದಂತಹ ಅವರಿಗೆ ಕೊಡಿ ಎಂದು ಪತ್ರ ಬರೆದೆವು. ಅವರ ನೆನಪು ಆಗಲಿಲ್ಲ.

ಛೇರ್ಮನ್:- ಕರ್ನಾಟಕ ರತ್ನ ಕುರಿತು ಮಾತನಾಡುತ್ತಿಲ್ಲ. ಅದರ ಬಗ್ಗೆ ಪ್ರತ್ಯೇಕವಾಗಿ ತಾವು ಪ್ರಸ್ತಾಪ ಮಾಡಿ.

ಶ್ರೀ ಎಸ್. ಹೆಚ್. ಕೌಜಲಗಿ:- ಕರ್ನಾಟಕದ ಪ್ರಶಸ್ತಿಯನ್ನು ಮಿನಿಸ್ಟರ್‌ರವರ ಪಿ.ಎಸ್.ಗೂ ಕೊಡುವುದಕ್ಕೆ ಹೊರಟಿದ್ದಾರೆಂದರೆ ನಮ್ಮ ರಾಜ್ಯದ ಪರಿಸ್ಥಿತಿ ಏನಾಗುತ್ತದೆಂದು ತಾವು ವಿಚಾರ ಮಾಡಿ.

ಶ್ರೀ ಹಾರ್ನಳ್ಳಿ ರಾಮಸ್ವಾಮಿ:- ಮಾನ್ಯ ಅಧ್ಯಕ್ಷರೆ. ಬೆಳಿಗ್ಗೆ ಪತ್ರಿಕೆಯನ್ನು ನೋಡಿದ ತಕ್ಷಣ ಅವರು ಇಲ್ಲಿಗೆ ಫೋನ್ ಮಾಡಿ ತಿಳಿಸಿದ್ದಾರೆ. ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ನಾಗರಾಜ್‌ರವರು ಹೇಳಿದ ರೀತಿಯಲ್ಲಿ ಸೌಜನ್ಯಕ್ಕಾದರೂ ಪ್ರಶಂಸೆ ಮಾಡುತ್ತಾರೆಂದು ಅಂದುಕೊಂಡೆ. ಅವರು ಮಾಡಿದ್ದಾರೆ. ಬಹಳ ಸಂತೋಷ. ಒಳ್ಳೆಯ ಕೆಲಸ ಮಾಡಿದಾಗಲೂ ಒಳ್ಳೆಯದು ಮಾಡಿದ್ದಾರೆ ಎಂದು ಹೇಳದೆ ಹೋದರೆ ಯಾವಾಗ ನಾವು ಹೇಳಬೇಕು. We should be objective. ವಿಶ್ವವಿದ್ಯಾನಿಲಯದವರು ಹೇಗೆ ಕೊಟ್ಟರೂ ಏತಕ್ಕೆ ಬಿಟ್ಟರೋ ಯಾರಿಗೆ ಗೊತ್ತು. ಅಲ್ಲೂ ಬೇಕಾದಷ್ಟು ಜನ sycophants ಇರಬಹುದು. The good thing is that he has declined to receive the Doctorate with all sincerity. ಅದನ್ನು ನಾವು ಅಪ್ರಿಷಿಯೇಟ್ ಮಾಡೋಣ. ಈ ವಿಷಯ ಇಲ್ಲಿಗೆ ಮುಕ್ತಾಯಮಾಡೋಣ.

ರಾಜ್ಯಪಾಲರ ಭಾಷಣಕ್ಕೆ ಸಲ್ಲಿಸತಕ್ಕ ವಂದನಾರ್ಪಣ ಪ್ರಸ್ತಾವದ ಮೇಲಿನ ಚರ್ಚೆ

*ಶ್ರೀ ಆರ್.ವಿ. ದೇಶಪಾಂಡೆ (ವಿರೋಧ ಪಕ್ಷದ ನಾಯಕರು):- ಮಾನ್ಯ ಅಧ್ಯಕ್ಷರೆ, ತಾವು ದಯಮಾಡಿ ತಪ್ಪು ತಿಳಿದುಕೊಳ್ಳಬಾರದು. ಏಕೆಂದರೆ ನಾನು ಮಾತನಾಡುವಾಗ ತಾವು ಅಧ್ಯಕ್ಷಸ್ಥಾನದಲ್ಲಿದ್ದೀರಿ. ಈ ಡಿಬೇಟ್ ತಾವೇ ಇನಿಷಿಯೇಟ್ ಮಾಡಿದ್ದೀರಿ. ಕೆಲವು ಟೀಕೆ ಟಿಪ್ಪಣಿಗಳನ್ನು ನಾನು ಮಾಡಬೇಕಾಗುತ್ತದೆ.

ಛೇರ್ಮನ್:- ಅಮ್ಮ ಅಧ್ಯಕ್ಷರಿಗಲ್ಲ, ಜಿ.ಎಸ್. ಆಚಾರ್‌ರವರಿಗೆ.

ಶ್ರೀ ಆರ್.ವಿ. ದೇಶಪಾಂಡೆ:- ಮಾನ್ಯ ಅಧ್ಯಕ್ಷರೆ, ರಾಜ್ಯಪಾಲರ ಭಾಷಣದ ಈ ಅಭಿನಂದನಾ ನಿರ್ಣಯಕ್ಕೆ ನಾನು ವಿರೋಧವನ್ನು ಸೂಚಿಸುತ್ತಾ, ಒಂದು ಮೂಲಭೂತವಾದಂತಹ ಪ್ರಶ್ನೆಯನ್ನು ನಾನು ಇಡಲಿಕ್ಕೆ ಪ್ರಯತ್ನ ಮಾಡುತ್ತೇನೆ. ಮಾನ್ಯ ರಾಜ್ಯಪಾಲರ ಭಾಷಣದ ಅವಶ್ಯಕತೆ ಇದೆಯೇ ಎನ್ನುವುದರ ಬಗ್ಗೆ ಇವತ್ತು ಚರ್ಚೆಯಾಗಬೇಕಾಗಿದೆ. ಏಕೆಂದರೆ ಇವತ್ತು